■ ವಿಶಾಖ ಎನ್.



# ದಿಲ್ಜಿತ್ ಪಂಜಾಬಿ ಸಿನಿಮಾ ಇಲ್ಲಿನವರಿಗೆ ಇಲ್ಲ

ದಿಲ್ಜಿತ್ ದೋಸಾಂಝ್ ಗಾಯಕರಾಗಿ ವಿಶ್ವಮಟ್ಟದಲ್ಲಿ ಜನಪ್ರಿಯತೆ ಗಳಿಸಿದವರು. ನಟರಾಗಿ ಪಂಜಾಬಿ ಸಿನಿಮಾಗಳ ಮೂಲಕ ಅವರು ತಮ್ಮದೇ ಶೈಲಿಯ ಮನರಂಜನೆ ಉಣಬಡಿಸುತ್ತಾ ಬಂದಿದ್ದಾರೆ.

ಅವರು ತಮ್ಮ ಹೊಸ ಸಿನಿಮಾ 'ಸರ್ದಾರ್ ಜಿ 3' ಅನ್ನು ಭಾರತ ಹೊರತುಪಡಿಸಿ ಮಿಕ್ಕ ಸ್ಥಳಗಳಲ್ಲಿ ಬಿಡುಗಡೆ ಮಾಡಬೇಕಾದ ಅನಿವಾರ್ಯ ಎದುರಾಯಿತು. ಅವರು ಅದಕ್ಕೂ ಬಾಗಿದರು. ಸಿನಿಮಾದ ನಿರ್ಮಾಪಕರೂ ಆದ ಅವರು, ಪಾಕಿಸ್ತಾನದ ನಟಿ ಹನಿಯಾ ಅಮೀರ್ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡಿದ್ದರು. ಸಿನಿಮಾ ಸಿದ್ಧಗೊಳ್ಳುವ ಹೊತ್ತಿಗೆ ಪಹಲ್ಗಾಮ್ ದಾಳಿ ನಡೆದು, ಆಪರೇಷನ್ ಸಿಂಧೂರ ನಡೆದು ಪರಿಸ್ಥಿತಿ ಬದಲಾಯಿತು. ಭಾರತ ಹಾಗೂ ಪಾಕಿಸ್ತಾನದ ನಡುವಿನ ಸಂಬಂಧ ಇನ್ನಷ್ಟು ಹಳಸಿತು. ಹೀಗಾಗಿ ಪಾಕಿಸ್ತಾನದ ನಟಿ ಇರುವ ಚಿತ್ರವನ್ನು ಭಾರತದಲ್ಲಿ ಬಿಡುಗಡೆ ಮಾಡಕೂಡದು ಎಂದು ಇಲ್ಲಿನ ಸಿನಿಮಾ ಕಾರ್ಮಿಕರ ಒಕ್ಕೂಟಗಳು ಆಗ್ರಹಿಸಿದವು. ಎಲ್ಲರ ಭಾವನೆಗಳಿಗೆ ಬೆಲೆ ಕೊಟ್ಟು ದಿಲ್ಜಿತ್ ತಮ್ಮ ಸಿನಿಮಾವನ್ನು ಭಾರತದಲ್ಲಿ ಬಿಡುಗಡೆ ಮಾಡದೆ, ಉಳಿದ ಕಡೆ ತೆರೆಕಾಣಿಸಿದರು. ಕೆಲವರು ಇದನ್ನು ಸಿನಿಮಾ ಜಾಗತೀಕರಣದ ಪರಮಾವಧಿ ಎಂದು ಬಣ್ಣಿಸುತ್ತಿದ್ದಾರೆ. ■



# ಎಂತಹ ಸಿನಿಮಾ ಕೊಟ್ಟೆ ಎನ್ನುವ ಲೆಕ್ಕಾಚಾರ

ಅಮೀರ್ ಖಾನ್ ಅವರಿಗೆ 'ಮಿಸ್ಟರ್ ಪರ್ಫೆಕ್ಟ್' ಎಂಬ ಗುಣ ವಿಶೇಷಣ ಇದೆ. ಅವರು ಅದಕ್ಕೆ ಅನ್ವರ್ಥ ಯಾಕೆ ಎನ್ನುವುದನ್ನು 'ಸಿತಾರೆ ಜಮೀನ್ ಪರ್' ಹಿಂದಿ ಸಿನಿಮಾ ರುಜುವಾತು ಮಾಡಿದೆ. ಪ್ಯಾನ್ ಇಂಡಿಯಾ ಸಿನಿಮಾ ಮಾಡುವ ಭರಾಟೆಯಲ್ಲಿ ಮುನ್ನೂರು – ನಾಲ್ಕುನೂರು ಕೋಟಿ ರೂಪಾಯಿ ಹಣ ಸುರಿದು ವರ್ಷಗಟ್ಟಲೆ ಚಿತ್ರಗಳ ಹೊಸೆಯುವವರ ಸಾಲಿನಿಂದ ಅಮೀರ್ ಆಚೆ ನಿಂತರು. 80–90 ಕೋಟಿ ರೂಪಾಯಿ ಬಜೆಟ್‌ನಲ್ಲೇ ಸಿನಿಮಾ ನಿರ್ಮಿಸಿ ಜಾಣರಾದರು. ಅಷ್ಟು ಹಣವನ್ನು ಮರಳಿ ಪಡೆಯುವುದು ಇವತ್ತಿನ ಮಾರುಕಟ್ಟೆ ಲೆಕ್ಕಾಚಾರದ ಪ್ರಕಾರ ಕಷ್ಟವೇನೂ ಅಲ್ಲ. ಅದಕ್ಕೂ ಮುಖ್ಯವಾಗಿ, ಡಾರ್ಕ್ ಕಾಮಿಡಿಗಳು, ಹೊಡೆದಾಟದ ವೈಭವೀಕರಣ ರಾರಾಜಿಸುತ್ತಿರುವ ಈ ಕಾಲಘಟ್ಟದಲ್ಲಿ ಅಮೀರ್ ಮಾನವೀಯ ಎಳೆಯ ಕಥೆಯನ್ನು ತೆಗೆದುಕೊಂಡಿರುವುದು.

ದೈಹಿಕವಾಗಿ, ಮಾನಸಿಕವಾಗಿ ಸಮಸ್ಯೆ ಇರುವ ಜನರನ್ನು ಬಹುತೇಕರು ತಮ್ಮದೇ ಹಳೆಯ ಮಸೂರದಿಂದ ನೋಡುತ್ತಾ ಇರುತ್ತಾರೆ. ಸ್ವಲ್ಪ ಆಂಗಿಕ ನಿಯಂತ್ರಣ ಇಲ್ಲದವರನ್ನು ಕಂಡರೂ 'ತಿಕ್ಕಲ', 'ಹುಚ್ಚ' ಎಂದು ಸಾರ್ವತ್ರೀಕೃತ ಅಭಿಪ್ರಾಯ ಒಂದನ್ನು ಹೇರಿಬಿಡುವ ಜಮಾನ ಇದು. ಅಮೀರ್ ನಿರ್ಮಾಣದ 'ಸಿತಾರೆ ಜಮೀನ್ ಪರ್' ಆ ಅಭಿಪ್ರಾಯದ ಬಲೂನಿಗೆ ಸೂಜಿಮೊನೆ ತಾಕಿಸಿದೆ.

ನಿರ್ದೇಶಕ ಆರ್.ಎಸ್. ಪ್ರಸನ್ನ ಈ ಚಿತ್ರದ ನಿರ್ದೇಶಕ. ಅವರು ಸ್ಪೇನ್ ಸಿನಿಮಾ 'ಚಾಂಪಿಯನ್ಸ್'ನಿಂದ ಕಥೆಯ ಆತ್ಮ ಹಾಗೂ ಕೆಲವು ಭಾವುಕ ಸನ್ನಿವೇಶಗಳನ್ನು ಯಥಾವತ್ ಎತ್ತಿಕೊಂಡಿರುವುದು ನಿಜ. ಅದನ್ನು ಗುಟ್ಟೇನೂ ಮಾಡಿಲ್ಲ. ಹೀಗಾಗಿ ಅವರ ಪ್ರಾಮಾಣಿಕತೆಯ ಕುರಿತು ಅನುಮಾನ ಇಲ್ಲ. ಅದನ್ನು ಅವರು ಭಾರತದ ಕಥನವಾಗಿ ಮಾರ್ಪಾಟು ಮಾಡಿರುವುದರಲ್ಲಿ ಸೂಕ್ಷ್ಮ ಇದೆ.

ಪ್ರಸನ್ನ 2013ರಲ್ಲಿ 'ಕಲ್ಯಾಣ ಸಮಯಲ್ ಸಾಧಂ' ಎನ್ನುವ ತಮಿಳು ಸಿನಿಮಾ ಮೂಲಕ ನಿರ್ದೇಶಕ ಆದವರು. ಆಗಿನ್ನೂ ಮದುವೆಯಾಗುವ ಯುವಕನ ನಿಮಿರು ಸಮಸ್ಯೆಯ ವಸ್ತುವಿನ ಚಿತ್ರ ಅದು. ಅಂತಹ ವಸ್ತುವನ್ನು ಅವರು ನಿಭಾಯಿಸಿದ್ದ ರೀತಿಯಲ್ಲೇ ಅಭಿರುಚಿಯ ಝಲಕ್ ಒಂದು ವ್ಯಕ್ತಗೊಂಡಿತ್ತು. 'ಶುಭ ಮಂಗಲ್ ಸಾವಧಾನ್' ಹಿಂದಿ ಸಿನಿಮಾ ನಿರ್ದೇಶಿಸಿದ ಮೇಲೆ ಅವರೊಳಗಿನ ತುಂಟತನ, ನವಿರುತನ, ಆರೋಗ್ಯಕರವಾಗಿ ಹಾಸ್ಯ ಕಟ್ಟುವ ಬಗೆ ಎಲ್ಲವೂ ಅನಾವರಣಗೊಂಡಿದ್ದವು. ಅಮೀರ್ ಈ ಕಾರಣಕ್ಕೇ ಅವರನ್ನು ನೆಚ್ಚಿಕೊಂಡರು. ಹೊಸ ಹುಡುಗರನ್ನು ಆಯ್ಕೆ ಮಾಡಿಕೊಂಡು, ಕಮ್ಮಟ ನಡೆಸಿ, ಸಹಜಾಭಿನಯವನ್ನು ಹೊರತೆಗೆಸಿದರು.

ಸಿನಿಮಾದ ಸ್ಯಾಟಲೈಟ್ ಹಕ್ಕನ್ನು ಯಾರಿಗೂ ಕೊಡದೆ ಅಮೀರ್ ತಮ್ಮಲ್ಲೇ ಇಟ್ಟುಕೊಂಡರು. ಸಣ್ಣ ಪುಟ್ಟ ಪ್ರಚಾರದ ಅವಕಾಶಗಳನ್ನೂ ಅವರು ಬಿಟ್ಟುಕೊಡಲಿಲ್ಲ. ಬೆಂಗಳೂರಿನ ವೀರೇಶ್ ಚಿತ್ರಮಂದಿರದಲ್ಲಿ ಅಂಗವಿಕಲ ಹಾಗೂ ಮಾನಸಿಕ ಸಮಸ್ಯೆ ಇರುವ ಮಕ್ಕಳಿಗೆ ಉಚಿತವಾಗಿ ಸಿನಿಮಾ ತೋರಿಸುವ ವ್ಯವಸ್ಥೆಯನ್ನೂ ಮಾಡಿದರು. ಸಿನಿಮಾ ಎಷ್ಟು ಹಣ ಗಳಿಸಿತು ಎನ್ನುವುದು ಸಾಮಾನ್ಯವಾಗಿ ಕೇಳಿಬರುವ ಲೆಕ್ಕಾಚಾರ. ಆದರೆ ಅಮೀರ್ ಪ್ರಕಾರ ಎಂತಹ ಸಿನಿಮಾ ಕೊಟ್ಟೆವು ಎನ್ನುವುದು ಮುಖ್ಯ. ಅವರ ಈ ಧೋರಣೆಗೆ 'ಸಿತಾರೆ ಜಮೀನ್ ಪರ್' ಪುಷ್ಟಿ ಒದಗಿಸಿದೆ. ■